ಯಾವುವು ಅಂದ್ರೆ ಕುವೆಂಪು, ಬೇಂದ್ರೆ, ಪುತಿನ, ಕುರ್ತಕೋಟಿ. ಇವರನ್ನು ಬಿಟ್ರೆ ನನಗೆ ಮೈಸೂರು ವಿಶ್ವವಿದ್ಯಾಲಯದವರ ಜೊತೆಗೆ ಅಪಾರವಾದ ಕೋಪ ಇತ್ತು. ಅಲ್ಲಿ ಯಾರೂ ವಿಮರ್ಶಕರಿಲ್ಲ ಅಂತ. ಸಾಹಿತ್ಯ ವಾರ್ಷಿಕಗಳಲ್ಲಿಯ ನನ್ನ ಬರಹಗಳನ್ನು ನೋಡಿದ್ರೆ ಗೊತ್ತಾಗುತ್ತೆ. ಆವಾಗ ನಾನು ಆಯಾ ವರ್ಷದ ವಿಮರ್ಶೆಯ ಕೃತಿಗಳ ಬಗ್ಗೆ ಬರೀತಿದ್ದೆ. ದೇಜಗೌ, ರಾಗೌ, ಸಿಪಿಕೆ, ತಿಪ್ಪೇರುದ್ರಸ್ವಾಮಿ ಇವರೆಲ್ಲರ ಪುಸ್ತಕಕ್ಕೂ ನನ್ನ ಟೀಕೆ ಇರ್ತಾ ಇತ್ತು. ಇದು ಎಲ್ಲೀವರೆಗೆ ಹೋಯ್ತು ಅಂದ್ರೆ, ಒಮ್ಮೆ ಕೈವಾರದಲ್ಲಿ ಸಾಹಿತ್ಯ ಸಮ್ಮೇಳನವಿತ್ತು. ನಾನು, ಚಿ. ಶ್ರೀನಿವಾಸರಾಜು, ಎಚ್.ಎಸ್. ರಾಘವೇಂದ್ರರಾವ್ ಅವರೆಲ್ಲ ಹೋಗಿದ್ವಿ. ವಾಪಾಸು ಬರುವಾಗ ಯಾವುದೋ ಒಂದು ವ್ಯಾನ್ ಹತ್ತಿಕೊಂಡು ಬರ್ತಾ ಇದ್ವಿ. ಅದರೊಳಗೆ ಸುಜನಾ ಇದ್ರು. ನಾನು ಅವರಿಗೆ ನಮಸ್ಕಾರ ತಿಳಿಸಿ, 'ಸರ್, ಮಹಾರಾಜಾ ಕಾಲೇಜಿನಲ್ಲಿದ್ದಾಗ ನಿಮ್ಮ ಉಪನ್ಯಾಸಗಳನ್ನೆಲ್ಲ ಕೇಳಿದ್ದೀನಿ, ಕುಮಾರವ್ಯಾಸನ ಬಗ್ಗೆ ಮಾತಾಡಿದ್ದು' ಅಂತೆಲ್ಲ ಹೇಳಿದೆ. ಅದಕ್ಕವರು ನನ್ನ ಕಡೆ ನೋಡದೆ, 'ಹಾಂ, ಏನೀಗ?' ಅಂತ ಕೊಂಚ ಸಿಟ್ಟಿನಲ್ಲೆ ಹೇಳಿದರು. 'ಸರ್, ಯಾಕ್ ಕೋಪ ಮಾಡ್ಕೊಳ್ತಾ ಇದ್ದೀರಿ?' ಅಂದೆ. 'ನಿಮಗೆ ನಮ್ಮ ಬಗ್ಗೆ ಗೌರವ ಇಲ್ಲ ಅಲ್ವಾ?' ಅಂದ್ರು. ಬಹುಶಃ ಮೈಸೂರಿನವರಿಗೆ ಬಹಳ ಡೀಪ್ ರೂಟೆಡ್ ಆಗಿ ಅದು ಹರ್ಟ್ ಮಾಡಿದೆ ಅನ್ನಿಸ್ತು. ಅವರಿಗೆ ಬೆಂಗಳೂರಿನ ಕನ್ನಡ ವಿಭಾಗದವರು ನಮ್ಮ ವಿರೋಧಿಗಳು ಅನ್ನೋ ತರಹ ಕಾಣ್ತಿತ್ತೇನೊ. ಇದನ್ನ ಯಾಕೆ ಹೇಳ್ದೆ ಅಂದ್ರೆ, ಮೈಸೂರಿನಲ್ಲಿ ನಮಗೆ ಮಾದರಿಗಳು ಸಿಗ್ತಾ ಇರಲಿಲ್ಲ. ಇನ್ನು ಕುರ್ತಕೋಟಿ ಅವರ ಬರವಣಿಗೆಯ ಮಾದರಿ ಇತ್ತಲ್ಲ, ಅದರೊಳಗೆ ನನಗೆ ಟೂಲ್ಸ್‌ಗಳೇ ಸಿಗ್ತಾ ಇರಲಿಲ್ಲ. ಅಂದ್ರೆ ಒಂದು ಅಭಿಪ್ರಾಯವನ್ನು ತಳೆಯೋದಕ್ಕೆ ಯಾವ ಪರಿಕರಗಳನ್ನು ಬಳಸಿದ್ದಾರೆ? ಅವರಲ್ಲಿ ಅಭಿಪ್ರಾಯಗಳಿವೆ, ನಿಲುವುಗಳಿವೆ, ಆದರೆ ಇವುಗಳನ್ನು ತಳೆಯಲು ಬಳಸಿದ ಸಾಹಿತ್ಯಿಕ ತತ್ವಗಳು ಯಾವುವು? ಗೊತ್ತಾಗ್ತಾ ಇರಲಿಲ್ಲ. ನಮ್ಮ ಕನ್ನಡ ವಿಭಾಗದಲ್ಲಿ ಒಂದು ವಿಚಿತ್ರ ಆಸೆಯೂ ಇತ್ತು. ನಮ್ಮದೇ ಹೊಸದೇನನ್ನೋ ಹೇಳಬೇಕು, ಹೊಸ ತರಹ ಹೇಳಬೇಕು, ಇಲ್ದೇ ಇದ್ರೆ ಯಾಕೆ ಬರೀಬೇಕು? ಅಂತ. ಬೆಂಗಳೂರು ವಿಶ್ವವಿದ್ಯಾಲಯದಲ್ಲಿ 1970ರಿಂದ 75ರವರೆಗೆ ಓದಿದ ವಿದ್ಯಾರ್ಥಿಗಳನ್ನು ಗಮನಿಸಿ. ಅವರಲ್ಲಿ ಬಹುತೇಕರಿಗೆ ಈ ತರಹದ ಅಹಂಕಾರವಿದೆ; ಅಹಂಕಾರ ಅಂತ ಕರೆಯೋದಾದ್ರೆ. ಇವರೆಲ್ಲ ನಾನ್‌ಕನ್‌ಫರ್ಮಿಸ್ಟ್. ಇಟ್ ಮೇ ಬಿ ಒನ್ ಆಫ್ ದ ರೀಜನ್ ಅಂತ ಕಾಣುತ್ತೆ. ಏನೋ ಹೊಸದನ್ನು ಹೇಳಬೇಕು. ಎಲ್ಲರನ್ನೂ ಗೌರವಿಸಿದ್ವಿ, ಆದ್ರೆ ಪೂಜ್ಯ ಭಾವದಿಂದ ನೋಡಲಿಲ್ಲ. ರಂ.ಶ್ರೀ. ಮುಗಳಿ, ಜಿ.ಎಸ್. ಶಿವರುದ್ರಪ್ಪ, ಎಂ. ಚಿದಾನಂದಮೂರ್ತಿ ಎಲ್ಲರ ಬರವಣಿಗೆಯ ಬಗ್ಗೆ ಗೌರವವಿತ್ತು.

ಒಮ್ಮೆ ಜಿ.ಎಸ್. ಶಿವರುದ್ರಪ್ಪ ಅವರು ಪಂಪನ ಬಗ್ಗೆ ಕೃತಿಯೊಂದನ್ನು ಸಂಪಾದಿಸ್ತಾ ಇದ್ರು. ನಾನು ಅದರಲ್ಲಿ 'ಪಂಪನ ದೇಸಿ' ಎಂಬ ಲೇಖನ ಬರೆದಿದ್ದೆ. ಅವರು ಅಲ್ಲಿಯ ಕೆಲ ಸಂಗತಿಗಳ ಬಗ್ಗೆ ಆಕ್ಷೇಪವೆತ್ತಿ ಬದಲಾಯಿಸಲು ಹೇಳಿದರು. ಅವರದೇ ಭಾಷೆಯಲ್ಲಿ. 'ಇಲ್ಲ ಸರ್, ನಿಮಗೆ ಇಷ್ಟ ಇದ್ರೆ ಲೇಖನ ಬಳಸಿ, ಇಲ್ಲವಾದರೆ ಬಿಟ್ಟುಬಿಡಿ' ಅಂತ ಹೇಳಿದೆ. ಆಗೊಂದು ಪತ್ರಿಕೆ ಬರ್ತಾ ಇತ್ತು. 'ಸಂಕೀರ್ಣ' ಅಂತ. ವಿಮರ್ಶಾ ಪತ್ರಿಕೆ ಅದು. ವಿದ್ಯಾರ್ಥಿಗಳೇ ತರ್ತಾ ಇದ್ರು. ಅದರಲ್ಲಿ 'ವಂಶವೃಕ್ಷ'ದ ಬಗ್ಗೆ ನಾನೊಂದು ಲೇಖನ ಬರೆದಿದ್ದೆ. ಜಿಎಸ್‌ಎಸ್ ತಮ್ಮ ರೂಮಿಗೆ ಕರೆಸಿದ್ರು. 'ನೀವೇನಾ ಬರೆದಿದ್ದು?' ಅಂದ್ರು. 'ಹೌದು ಸರ್' ಅಂದೆ. 'ಯಾರದಾದ್ರೂ ಬಗ್ಗೆ ಬರೀಬೇಕಾದ್ರೆ ಸ್ವಲ್ಪ ಗೌರವ ಇಟ್ಕೊಂಡು ಬರೀಬೇಕು. ಭಿನ್ನಾಭಿಪ್ರಾಯ ಹೇಳಬಾರದು ಅಂತಲ್ಲ, ಆದ್ರೆ ಗೌರವ ಇರಬೇಕು' ಅಂತ ಸೂಚಿಸಿದರು. ಆವಾಗ ನಾನೇನೂ ಮಾತಾಡಲಿಲ್ಲ. ಆದ್ರೆ ಅವರ ಮಾತು ನನಗೆ ಒಪ್ಪಿಗೆ ಆಗಿರಲಿಲ್ಲ. ಒಂದು ನಾನ್‌ಕನ್‌ಫರ್ಮಿಸ್ಟ್ ನೇಚರ್ ಮೊದಲಿನಿಂದಲೂ ನನ್ನಲ್ಲಿದೆ. ಹುಟ್ಟಿನ ಕಾರಣದಿಂದಲೂ ಇದು ಬಂದಿರಬಹುದು. ಜಾತಿಯ ಕಾರಣದಿಂದಾಗಿ ಅನುಭವಿಸ್ತಾ ಇರೋ ಬಿಕ್ಕಟ್ಟುಗಳಿರ್ತಾವಲ್ಲ, ಅವು ಕೂಡ ಈ ತರಹದ ಒಂದು ಸ್ವಭಾವಕ್ಕೆ ಕಾರಣ ಆಗಿರಬಹುದು. ಖಚಿತವಾಗಿ ಏನಾಗಿದೆಯೊ ನನಗೆ ಗೊತ್ತಿಲ್ಲ. ಇದು ಬಹುಶಃ ಯಾವುದಕ್ಕೂ ಹೊಂದಿಕೊಳ್ಳದೇ ಇರುವ, ಯಾವುದನ್ನೂ ಅನುಸರಿಸದೇ ಇರುವ ಮಾದರಿಯ ಕಡೆಗೆ ಎಳಕೊಂಡು ಹೋಗಿರಬಹುದು.